# ಅಕಾಡೆಮಿಗಳಿಗೆ ಕಾಯಕಲ್ಪ





ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವ್ಯಾಪ್ತಿಯಲ್ಲಿರುವ ವಿವಿಧ ಅಕಾಡೆಮಿಗಳಿಗೆ ಅಧ್ಯಕ್ಷ, ಸದಸ್ಯರ ನೇಮಕದಲ್ಲಂತೂ ಅರಾಜಕತೆ ಇತ್ತು. ಅಧ್ಯಕ್ಷರಿದ್ದರೆ ಸದಸ್ಯರಿಲ್ಲ, ಸದಸ್ಯರಿದ್ದರೆ ಅಧ್ಯಕ್ಷರಿಲ್ಲ ಎಂಬ ಪರಿಸ್ಥಿತಿ ಇರುತ್ತಿತ್ತು. ಇದಕ್ಕೆ ಇತಿಶ್ರೀ ಹಾಡಿದ ಸಿದ್ದರಾಮಯ್ಯ, ನಿಗದಿತ ಅವಧಿಯಲ್ಲಿ ಅಧ್ಯಕ್ಷರು, ಸದಸ್ಯರ ನೇಮಕಕ್ಕೆ ಕ್ರಮ ಕೈಗೊಂಡರು. ಅಧ್ಯಕ್ಷರ ಅವಧಿ ಮುಗಿದ ಬಳಿಕ ಅನೇಕ ವರ್ಷಗಳವರೆಗೆ ಅಧ್ಯಕ್ಷರಿಲ್ಲದೇ ಅಕಾಡೆಮಿಗಳು ಖಾಲಿ ಉಳಿಯುತ್ತಿದ್ದವು. ನಾಲ್ಕೂವರೆ ವರ್ಷಗಳಲ್ಲಿ ಎಲ್ಲ ಒಮ್ಮೆ ಅಧ್ಯಕ್ಷರಾದವರ ಅವಧಿ ಮುಗಿದಿದೆ. ಮತ್ತೆ ಒಂದುವರ್ಷ ಇದ್ದಾಗ ಉಳಿದೆಲ್ಲಾ ಅಕಾಡೆಮಿಗಳಿಗೆ ಹೊಸಬರ ನೇಮಕವಾಗಿದೆ. ಇದು ಇಲಾಖೆ ಹೆಗ್ಗಳಿಕೆ.

ಅಕಾಡೆಮಿಗಳ ಪ್ರಶಸ್ತಿಗಳಾಗಲಿ ಅಥವಾ ಜೀವಮಾನ ಸಾಧನೆಯ ಪ್ರಶಸ್ತಿಗಳನ್ನಾಗಿ ಆಯಾಯ ವರ್ಷ ನೀಡುವ ಪರಿಪಾಠವೇ ಇರಲಿಲ್ಲ. ಒಂದು ಅಥವಾ ಎರಡು ವರ್ಷದ ಪ್ರಶಸ್ತಿಯನ್ನು ಒಟ್ಟೊಟ್ಟಿಗೆ ಪ್ರದಾನ ಮಾಡುವ ಪದ್ಧತಿ ಇತ್ತು. ಅದಕ್ಕೆ ಕೊನೆ ಹಾಡಲು ಸಚಿವೆ ಉಮಾಶ್ರೀ ಮುಂದಾದರು. ಹೀಗಾಗಿ ಆಯಾಯ ವರ್ಷದ ಪ್ರಶಸ್ತಿಯನ್ನು ಅದೇ ವರ್ಷವೇ ನೀಡುವ ಪದ್ಧತಿಯನ್ನು ಜಾರಿಗೆ ತರಲಾಯಿತು.

## ನೀತಿಯ ಚೌಕಟ್ಟು

ಕರ್ನಾಟಕವು ಜನ್ಮ ತಳೆದು ಇಷ್ಟು ವರ್ಷ ಗತಿಸಿದರೂ ರಾಜ್ಯಕ್ಕೆ ಒಂದು ಸಾಂಸ್ಕೃತಿಕ ನೀತಿಯೇ ಇರಲಿಲ್ಲ.